# ನೆಲದಾಕಾಶದ ನಿಟ್ಟುಸಿರು

ಕತ್ತಲ ಕೋಣೆಯಲ್ಲಿ ಸೂಜಿ
ಕಳೆದುಕೊಂಡ ಮುದುಕಿ
ಬೀದಿ ದೀಪದ ಬುಡದಲ್ಲಿ ಹುಡುಕುತ್ತಿದ್ದಾಳೆ
ಕತ್ತಲ ತಪ್ಪೊ? ಅಜ್ಜಿಯದೋ?

ಹಕ್ಕಿಯೊಂದು ಆರಗಲ್ಲಿನ ಬಿರುಕುಗಳಲ್ಲಿ
ಕಾಳು ಹುಡುಕುತ್ತಿದೆ
ಜೊತೆಗೆ ಬೀದಿ ದೀಪ ಸಾಥ್ ನೀಡುತ್ತಿದೆ

ಗುಂಬಜ್‌ಗಳ ಮಾಡಿನಲ್ಲಿ ಕೂತ ಹಕ್ಕಿಗಳು
ಹಾಡು ಹಾಡುವುದ ಮರೆತಿವೆ

ಏ ಹಕ್ಕಿಯೇ ಇಲ್ಲಿ ಕಾಳು ಬಿಡು
ಸಣ್ಣ ಹುಲ್ಲು ಕಡ್ಡಿಯು ಸಿಗುವುದಿಲ್ಲ
ಗುಡಿಸಿಟ್ಟಿದ್ದಾರೆ ನೀಟಾಗಿ
ಮನುಷ್ಯನ ಪಾದಗಳಿಗೆ ಮಾತ್ರ ಅವಕಾಶ.

ನೆಲದಾಕಾಶದ ನಿಟ್ಟುಸಿರುಗಳು
ಸದ್ದು ಕಳೆದುಕೊಂಡಿವೆ
ನಿನ್ನ ಕಣ್ಣುಗಳಲ್ಲಿ ರಕ್ತ ಬರುವ ಮುನ್ನ
ಹಾರಿ ಹೋಗು, ದಿಟ್ಟಿಸಿ ನೋಡಬೇಡ

ಇಲ್ಲಿ ಮನುಷ್ಯ ಎಲ್ಲವೂ ಮುಚ್ಚುತ್ತಾನೆ
ತಳದ ಯಾವ ಕಸ–ರಸಕ್ಕೂ ಜಾಗವಿಲ್ಲ
ಬರೀ ಹೊದಿಕೆಗಳು
ಚಂದವಾಗಿ ಹೊಳೆಯುತ್ತವೆ
ಕುರುಡರ ಪಾದಗಳು ಸಹ ನಂಬುವ ಹಾಗೆ.

● **ಕಪಿಲ ಪಿ. ಹುಮನಾಬಾದೆ**



# ಕಾಗೆ ರಾಗ

‘ದೀಪದ ಕೆಳಗೆ ಕತ್ತಲೆ
ಕಾಗೆಯಾಗಲಾರದು ಕೋಗಿಲೆ’
ಎಂಬ ರೂಢಿ ಮಾತುಗಳೂ
ಸುಳ್ಳಾಗಬಹುದು, ಕಾಲಗತಿಯಲ್ಲಿ

ದೀಪದ ಕೆಳಗಿನ ಬೆಳಕಿಗೆ
ಹೊಳೆಯುತಿದೆ ಕರಿಕಾಗೆ
ಸುಂದರ ಕಲಾಕೃತಿಯ ಹಾಗೆ
ಕಪ್ಪು–ಬಿಳಿಯ ಸೊಬಗು ಹೀಗೆ.

ಬೆಳಕಿನ ಚಿತ್ತಾರದಲಿ
ಕಾಗೆಯ ಬಾಗು ಬಳಕು
ಹೇಳುತಿದೆ ಜೀವದ ಗುಟ್ಟು
ಕತ್ತಲಗರ್ಭದಲಿ ಅರಿವಿನ ಹುಟ್ಟು.

● **ಬಿ.ಕೆ. ಮೀನಾಕ್ಷಿ**